ದಿನಾಂಕ: ಜನವರಿ 17, 2014

# ರಾಹುಲ್ ವಿಚಾರದಲ್ಲಿ ಎದೆಗುಂದಿದ ಕಾಂಗ್ರೆಸ್

ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಪ್ರಧಾನ ಮಂತ್ರಿ ಅಭ್ಯರ್ಥಿ ಘೋಷಿಸದೆ ಇರಲು ಕಾಂಗ್ರೆಸ್ ಪಕ್ಷ ನಿರ್ಧರಿಸಿದೆ. ಇದಕ್ಕೆ ಬದಲು ಅವರ ಪ್ರಚಾರೋಂದಲನದ ನೇತೃತ್ವವನ್ನು ಶ್ರೀ ರಾಹುಲ್ ಗಾಂಧಿ ವಹಿಸಲಿದ್ದಾರೆ. ವಂಶಾವಳಿ ನಿಯಂತ್ರಿತ ಪಕ್ಷದ ಅವನತಿ ಸ್ಪಷ್ಟವಾಗಿ ಗೋಚರಿಸುತ್ತಿದೆ. 25 ವರ್ಷಗಳಲ್ಲಿ, ಗಾಂಧಿ ಕುಟುಂಬದವರು ಈ ದೇಶದ ಪ್ರಧಾನ ಮಂತ್ರಿಯಾಗಿಲ್ಲ. ಭಾರತ, ಖಂಡಿತವಾಗಿಯೂ ಬದಲಾಗುತ್ತಿದೆ. ಗಾಂಧಿ ಕುಟುಂಬದವರು ಒಂದು ಪಕ್ಷವನ್ನು ನಿಯಂತ್ರಿಸಿಯಾರು ಆದರೆ ದೇಶವನ್ನಲ್ಲ. 2004ರಲ್ಲಿ ಅಂಜಿದ ವಂಶಸ್ಥರು ಅಧಿಕಾರದಿಂದ ದೂರವುಳಿದರು. ಈಗ, ಸೋಲಿನ ಭೀತಿಯಿಂದ ರಾಹುಲ್ ಗಾಂಧಿಯವರನ್ನು 2014ರ ಪ್ರಧಾನ ಮಂತ್ರಿ ಅಭ್ಯರ್ಥಿಯೆಂದು ಘೋಷಿಸಲು ಹಿಂಜರಿದಿದ್ದಾರೆ.

ಅವರ ಮೂಲ ಉದ್ದೇಶ ಇದಾಗಿರಲಿಲ್ಲ. ಪ್ರಧಾನ ಮಂತ್ರಿ ಅಭ್ಯರ್ಥಿಯನ್ನು ಸೂಕ್ತ ಸಮಯದಲ್ಲಿ ಘೋಷಿಸಲಾಗುವುದು ಎಂದು 2013ರ ಡಿಸೆಂಬರ್‌ನಲ್ಲಿ ಶ್ರೀಮತಿ ಸೋನಿಯ ಗಾಂಧಿಯವರು ಪ್ರಕಟಿಸಿದ್ದರು. ತಮ್ಮ ಇತ್ತೀಚಿನ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನ ಮಂತ್ರಿ ಡಾ.ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಲು ಶ್ರೀ ರಾಹುಲ್ ಗಾಂಧಿಯವರ ಗುಣಗಾನ ಮಾಡಿದ್ದರು. ಹಾಗಿದ್ದಲ್ಲಿ, ಈಗ ಪಕ್ಷವು ಎದೆಗುಂದಲು ಕಾರಣಗಳೇನು? ಪ್ರತಿಸ್ಪರ್ದೆ ಎದುರಿಸುವಲ್ಲಿ ಕಾಂಗ್ರೆಸ್ ಪಕ್ಷ ತನ್ನ ಮನೋಬಲ ಕಳೆದುಕೊಳ್ಳುತ್ತಿದೆ. ದೆಹಲಿ ವಿಧಾನ ಸಭಾ ಚುನಾವಣೆಯಲ್ಲಿ ಈ ಮೊದಲು ಈ ಸಂಗತಿ ಕಾಣಿಸಿಕೊಂಡಿತ್ತು. ಶ್ರೀ ರಾಹುಲ್ ಗಾಂಧಿಯವರ ಸಭೆಗಳಲ್ಲಿ ಜನರೇ ಇರಲಿಲ್ಲ ಹಾಗೂ ಅದಾದ ನಂತರ ದೆಹಲಿಯಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಲು ಯಾವೊಬ್ಬ ರಾಷ್ಟ್ರೀಯ ನಾಯಕನು ಬರಲಿಲ್ಲ. ಅಂಜಿಕೆ ಈಗ ಸ್ಪಷ್ಟವಾಗಿ ಗೋಚರಿಸುತ್ತಿದೆ. ಪ್ರತಿಕೂಲ ರಾಜಕೀಯ ಪರಿಸರದಲ್ಲಿ ಇರುವ ಒಂದೇ ಒಂದು ಆಶಾಕಿರಣವನ್ನು ಆರಿಸುವುದೇಕೆ. ಪ್ರತಿಸ್ಪರ್ದೆ ನೀಡಲು ಅಗತ್ಯ ಸ್ಪೂರ್ತಿ ಕಣ್ಮರೆಯಾಗಿದೆ. ಈ ಇಬ್ಬರು ವ್ಯಕ್ತಿಗಳ ತುಲನಾತ್ಮಕ ಗುಣಲಕ್ಷಣಗಳ ಕುರಿತು ಜನಾಭಿಪ್ರಾಯ ನರೇಂದ್ರ ಮೋದಿ ಅವರ ಪರವಿರುವಾಗ ಸಾರ್ವಜನಿಕ ವೇದಿಕೆಯಲ್ಲಿ ಇಬ್ಬರ ನಾಯಕರ ನಡುವೆ ಜನರು ಹೋಲಿಕೆ ಮಾಡುವುದನ್ನು ತಪ್ಪಿಸಿಕೊಳ್ಳಲು ಇರುವುದು ಒಂದೇ ಮಾರ್ಗ. ಇದೇ ಕಾರಣಕ್ಕೆ ಬಹುಷಃ ಕಾಂಗ್ರೆಸ್ ಪಕ್ಷ ಅಂತಿಮ ಹಂತದಲ್ಲಿ ತನ್ನ ನಿರ್ಣಯ ಬದಲಾಯಿಸಿದೆ. ಸರ್ಕಾರ ಮಾಡುವ ಅವಕಾಶವೇ ಇಲ್ಲದಾಗ, ಶ್ರೀ ರಾಹುಲ್ ಗಾಂಧಿಯವರ ಹೆಸರನ್ನು ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಘೋಷಿಸಿ ಫಲವೇನು!

ಪ್ರಧಾನ ಮಂತ್ರಿಗಳು ಧೈರ್ಯ ಪ್ರದರ್ಶಿಸಿದ್ದಾರೆ. 2014ರ ಚುನಾವಣೆಯಲ್ಲಿ ವಿಜಯಭೇರಿ ಬಾರಿಸಿದರೆ ಅದಕ್ಕೆ ರಾಹುಲ್ ಗಾಂಧಿ ಕಾರಣವೆಂದು ಅವರು ಘೋಷಿಸಿದ್ದಾರೆ. ಹಾಗಿದ್ದಲ್ಲಿ, ಸೋಲು ಕೂಡ ಅವರಿಗೆ ಸಲ್ಲುತ್ತದೆಯೆ? ನನಗೆ ಹಾಗನಿಸದು. ಗಾಂಧಿ ಕುಟುಂಬದವರು ತಪ್ಪು ಮಾಡಲು ಸಾಧ್ಯವೇ ಇಲ್ಲ ಎಂಬ ಅಂಧವಿಶ್ವಾಸದೊಂದಿಗೆ ಕಾಂಗ್ರೆಸ್ ಪಕ್ಷ ಕಾರ್ಯವಹಿಸುತ್ತದೆ. ಅವರಿಗೆ ಸೋಲೇ ಇಲ್ಲ. ಕೇವಲ ಪಕ್ಷ ಮಾತ್ರ ಸೋಲುತ್ತದೆ. ಕೇವಲ ಅವರಿಗೆ ನೀಡಿದ

ಸಲಹೆಗಳು ತಪ್ಪಾಗಲು ಸಾಧ್ಯ. ಗಾಂಧಿ ಕುಟುಂಬದ ಸದಸ್ಯರಿಗೆ ಪಕ್ಷದಲ್ಲಿ ಹೊಣೆಗಾರಿಕೆ ಇಲ್ಲ. ಅವರೇ ಪಕ್ಷವಾಗಿರುವಾಗ ಅದು ಹೇಗೆ ತಾನೆ ಇರಲು ಸಾಧ್ಯ.